ಪೊಲೀಸರ ತಂಡವೆ ಜೀಪಲ್ಲಿ ಹೋಗಿ ಮಾರಳ್ಳಿಯ ಊರೆಲ್ಲ ಸುತ್ತಿ ತಡಕಿದರೂ ಸಿಗಲಿಲ್ಲ. ಅಕ್ಕಪಕ್ಕದ ಹಳ್ಳಿಗಳಲಿ ಸುತ್ತಿ ಹುಡುಕಿದರೂ ಸಿಗದಾಯಿತು. ಯಾವ್ಯಾವುದೋ ಊರವರ ಯಾರ‍್ಯಾರದೋ ನೆರವಿನಂದ ಹಿಡಿದು, ಟೆಂಪೊಗೇರಿಸಿ ಪೊಲೀಸ್ ಸ್ಟೇಷನ್ ಮುಂದೆ ತಂದುಕಟ್ಟಿದರು. ಹಬ್ಬ ನಿಲ್ಲುವುದೋ ಎಂದು ಎರಡು ಊರ ಹಟ್ಟಿಯ ಜನರು ಕನಲಿದರು.

ಹಾರವಳ್ಳಿ ಬೆನ್ನೂರು ಊರುಗಳ ಹಿರಿಯರಿದ್ದಲ್ಲಿಗೆ ಪೊಲೀಸರು ಹೋಗಿ ಕರೆದು ಸಮಸ್ಯೆಯನ್ನು ಮುಗಿಸಲು ನೋಡಿದರು. ಎರಡೂ ಊರಿನ ಮುಂಚೂಣಿಯ ಹಿರಿಯರು, ಯಜಮಾನರು ಯಾರಿಗೂ ಸಿಗದಂತೆ ಊರು ಬಿಟ್ಟಿದ್ದರು. ಒಂದೂರಲ್ಲಿ ಅವರು ಸಿಕ್ಕರೆ ಇವರಿಲ್ಲ, ಇವರು ಸಿಕ್ಕರೆ ಅವರಿಲ್ಲ. ಸಿಕ್ಕವರು, ''ಕೋಣ ನಮ್ಮೂರದು ಇರಲಾರದು'' ಎಂಬ ಹಾರಿಕೆಯ ಉತ್ತರಗಳನ್ನು ಕೊಟ್ಟರು. ಜಾನಕಮ್ಮನ ಮಗ ಇನ್‌ಸ್ಪೆಕ್ಟರನಿಗೆ ತನ್ನವ್ವನ ನೋವಿಗೆ ಕಾರಣರಾದವರನ್ನು ಹಿಡಿಯುವಂತೆ ಒತ್ತಾಯಿಸಿದ. ಇನ್‌ಸ್ಪೆಕ್ಟರು ಊರೂರು ಅಲೆದ. ಸ್ಟೇಷನ್ ಮುಂದೆ ಕಟ್ಟಿದ ಮಾರಿಕೋಣ ತನ್ನ ಮುಂದಿಟ್ಟ ಮೇವು ನೀರು ಮುಟ್ಟದೆ ಹಾಗೇ ಇತ್ತು. ಕಟ್ಟಿದಲ್ಲೆ ವಾರ ಒಪ್ಪೊತ್ತು ಹಿಂಗೇ ಹೋಯಿತು. 'ನಮ್ಮೂರ ಕೋಣ ಇದು' ಎಂದು ಹಾರುವಳ್ಳಿಯವರು ಇತ್ತ ಸುಳಿಯಲಿಲ್ಲ, ಬೆನ್ನೂರವರು ಬೆನ್ನು ತೋರಿಸಲಿಲ್ಲ. ಮತ್ಯಾರೂ ಅದು ನಮ್ಮದು ಎಂದು ಅತ್ತ ಸುಳಿಯಲೇ ಇಲ್ಲ. ಜಾನಕವ್ವನ ರೊಂಡಿ ನೆಟ್ಟಗೆ ಆಗಲಿಲ್ಲ.

ಅದೆಲ್ಲಿ ಇವರಿಗೆ ಸುದ್ದಿ ಸಿಕ್ಕಿತೋ ಏನೊ! ಪ್ರಾಣಿ ದಯಾ ಸಂಘದವರು ಪೊಲೀಸ್ ಸ್ಟೇಷನ್‌ಗೆ ಬಂದು – 'ಕೋಣನ ಮೈ ಕೈಗೆ ಏನೂ ಆಗಕೂಡದು. ಏನೇ ಆದರೂ ನಮ್ಮ ತಕರಾರು ಇದೆ' ಎಂದು ಬರೆದುಕೊಟ್ಟರು.

ಸೇದೊ ಮಿಣೆಹಗ್ಗದಲ್ಲಿ ಕೋಣವನ್ನು ಬಿಗಿದು ಕಟ್ಟಿದ್ದರು. ಕೋಣ ಜಗ್ಯಾಡಿ, ಗುಡು ಗುಡುಗಿ ಗುಟುರು ಹಾಕುತಲೇ ಇತ್ತು. ಕಟ್ಟಿಹಾಕಿದ ಸಿಟ್ಟಿಗೆ ನೆಲಕೆರೆದು ಮಣ್ಣು ಚಿಮ್ಮುತಿತ್ತು. ಹೊಸಕ್ಯಾಡಿ ಮಿಸುಕ್ಯಾಡಿ ಪೊಗರು ದಿಗುರಲಿ ಎಗರಾಡುತಿತ್ತು. ಕಾಯುವ ಪೊಲೀಸರು ಹಗಲು ರಾತ್ರಿ ಕಾಯ್ದು ಕಾಯ್ದು ಸಾಕಾಗಿ ಸುಸ್ತಾಗಿ ಬೇಸರಿಕೇಲಿ ಬಸವಳಿದರು.

ಅದೊಂದು ನಟ್ಟಿರುಳ ಕರಿರಾತ್ರೀಲಿ ಕಟ್ಟಿದ ಹಗ್ಗವ ತಾನೇಕಿತ್ತು ಎತ್ತೋಡಿತೋ, ಪೊಲೀಸರೆ ಬಿಟ್ಟರೋ, ಗಲಾಟೆಗೆ ರೋಸಿ ಸ್ಟೇಷನ್‌ನ ಅಕ್ಕಪಕ್ಕದವರೋ, ಯಾವ ಊರವರೋ ಇನ್ಯಾರೋ ಹಗ್ಗ ಕೊಯಿದು ಬಿಟ್ಟರೋ, ಟೆಂಪೊಗೆ ಏರಿಸಿಕೊಂಡು ಒಯ್ದರೋ, ತರಿದೆ ಕೊಂದರೋ, ಎಲ್ಲವೂ ಮಾರಮ್ಮನ ಮಾಯೆಯೋ ಕಂಡವರಿಲ್ಲ.

ಸುತ್ತು ಸೀಮೇಲಿ ಕಂಡವರ ಕಾಣೆವು.

## ಕುರುವ ಬಸವರಾಜ್

ಕವಿ, ಕತೆಗಾರ, ಸಂಶೋಧಕ, ಜಾನಪದ ವಿದ್ವಾಂಸ, ಸಾಕ್ಷ್ಯಚಿತ್ರ ನಿರ್ದೇಶಕ ಬಸವರಾಜರ ಪ್ರಕಟಿತ ಪುಸ್ತಕಗಳು: 'ಕೋಳಿ ಅಂಕ', 'ಸೆಳೆತ' (ಕಥಾಸಂಕಲನಗಳು), 'ಬೇಲಿ ಮ್ಯಾಗಳ ಹೂವು' (ಕವನ ಸಂಕಲನ), 'ಮಣ್ಣ ಕುಸುಮದ ಹಕ್ಕಿ' (ಕಥನ ಕಾವ್ಯ), 'ಹುಲ್ಲೆ ಹಾಡು', 'ಕಾಡೊಡಲ ಹಾಡು' (ಹಾಡ್ಗತೆಗಳು), 'ಗುಲಗಂಜಿ ಮಾದೇವಿ', 'ಜನಪದ ಒಗಟು ಕಥೆಗಳು' (ಸಂಪಾದನೆ). ರಾಮನಗರದ ಜಾನಪದ ಲೋಕದ ಕ್ಯೂರೇಟರ್ / ಆಡಳಿತಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.